**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 3070/2014 CW-12 PW-8**

**ಸಾಕ್ಷಿಯನ್ನು ದಿಃ 04.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಚಂದ್ರಮ್ಮ |
| ಗಂಡನ ಹೆಸರುಃ | ನಂಜಪ್ಪ |
| ವಯಸ್ಸುಃ | 45 ವರ್ಷ |
| ವೃತ್ತಿಃ | ಅಂಗನವಾಡಿ ಶಿಕ್ಷಕಿ |
| ವಾಸ ಸ್ಥಳಃ | ಡಿಂಕ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಚಾಸಾ-2 ಗೊತ್ತು. ಆರೋಪಿಗಳು 1 ಮತ್ತು 3 ರವರು ಗೊತ್ತು.

ನಾನು 2008 ರಿಂದ ಡಿಂಕ ಗ್ರಾಮದಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. 2009 ರಲ್ಲಿ ನಾನು ಚನ್ನರಾಯಪಟ್ಟಣದ ಸಿ ಡಿ ಪಿ ಒ ಕಛೇರಿಗೆ ಮೀಟಿಂಗ್ ಗೆ ಬಂದಾಗ 3ನೇ ಆರೋಪಿ ಮತ್ತು ಸುರೇಶ್ ರವರು ಸಹ ಸಭೆಗೆ ಬಂದಿದ್ದು, ಮೈಕ್ರೊ ಇನ್ಸೂರೆನ್ಸ್ ಬಗ್ಗೆ ಮಾಹಿತಿ ನೀಡಿ ಇದು ಬಡ ಮಹಿಳೆಯರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದರಿಂದ ಕೆಲವು ಮಹಿಳೆಯರು ಪಾಲಿಸಿ ಮಾಡಿಸಿರುತ್ತಾರೆ. ನಾನು ಏಜೆಂಟರಾಗುವಂತೆ ತಿಳಿಸಿದರು. ನಾನು ಸಹ ಒಂದು ಪಾಲಿಸಿ ಮಾಡಿಸಿ, ನಮ್ಮ ಗ್ರಾಮದಲ್ಲಿ ಮತ್ತು ಬೇರೆ ಗ್ರಾಮಗಳಲ್ಲಿ ಒಟ್ಟು 64 ಪಾಲಿಸಿಗಳನ್ನು ಮಾಡಿಸಿರುತ್ತೇನೆ. ನಾನು ಸುಮಾರು 6 ವರ್ಷಗಳ ಕಾಲ ಇದೇ ರೀತಿ ಪಾಲಿಸಿಗಳನ್ನು ಮಾಡಿಸುತ್ತಿದ್ದೆ. ಸದರಿ ಪಾಲಿಸಿಗಳಿಂದ ಒಟ್ಟು ರೂ. 2,55,000/- ಹಣವನ್ನು ಪಾಲಿಸಿಗೆ ಕಟ್ಟಿಸಿರುತ್ತೇನೆ. ಇದರಲ್ಲಿ ರೂ. 25,000/- ಹಣ ಕೆಲವು ಪಾಲಿಸಿದಾರರಿಗೆ ಬಂದಿಲ್ಲ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಾನು ಆರೋಪಿತರನ್ನು ನೋಡಿದರೆ ಈಗ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆ ಸಮಯದಲ್ಲಿ ಮೋಹನ್ ರವರು ಸಹ ಸಭೆಗೆ ಬಂದಿದ್ದು, ಸಮನ್ವಯ ಎಲ್ತ್ ಎಜುಕೇಶನ್ ಮತ್ತು ರೂರಲ್ ಡೆವಲಪ್ ಮೆಂಟ್ ಸೊಸೈಟಿ ತಿಪಟೂರು ಸಂಸ್ಥೆಯ ಪರವಾಗಿ ನಾವು ಕೆಲಸ ಮಾಡುತ್ತಿರುವುದು ಎಂದು ತಿಳಿಸಿದರು ಎಂದರೆ ಸರಿ. ಈ ಸಂಸ್ಥೆ ಶಾಖೆ ಚನ್ನರಾಯಪಟ್ಟಣದದಲ್ಲಿ ಇದ್ದು ಅದರ ಕಾರ್ಯದರ್ಶಿಯ ಹೆಸರು ಚಿದಾನಂದ್ ಎಂದರೆ ಸರಿ. ನಂತರ ಸದರಿ ಸಂಸ್ಥೆಗೆ ಭೇಟಿ ನಿಡಿದ್ದೆ ಎಂದರೆ ಸರಿ. ಆದ ಚಿದಾನಂದ್ ರವರು ನಾನು ಏಜೆಂಟ್ ಆದರೆ ಶೇ. 3 ರಷ್ಟು ಹಣ ನೀಡುವುದಾಗಿ ತಿಳಿಸಿದರು ಎಂದರೆ ಸರಿ. ಈ ಸಂಬಂಧ ತರಭೇತಿ ನೀಡುವುದಾಗಿ, ಮೊದಲ ತಿಂಗಳಿಗೆ ಪಾಲಿಸಿ ಬಾಂಡ್ ಮನೆಯ ವಿಳಾಸಕ್ಕೆ ಬರುವುದಾಗಿ ತಿಳಿಸಿದ್ದರು ಎಂದರೆ ಸರಿ. ನಾನು ಸಂಸ್ಥೆಗೆ ಭೇಟಿ ನೀಡಿದಾಗ ಚಾಸಾ-2 ರವರು ಸಹ ಹಾಜರಿದ್ದರು ಎಂದರೆ ಸರಿ. ಸದರಿ ಸಂಸ್ಥೆಯವರು ನನಗೆ ಸಬ್ ಏಜೆಂಟ್ ಸಂಖ್ಯೆ 26 ಎಂದು ನೀಡಿದ್ದರು ಎಂದರೆ ಸರಿ. ನಾನು ಪಾಲಿಸಿಗಳನ್ನು 2009 ರಿಂದ 2013 ರವರಗೆ ಮಾಡಿಸಿರುತ್ತೇನೆ ಎಂದರೆ ಸರಿ. ನಾನು ಪಾಲಿಸಿದಾರರಿಂದ ಪಾಲಿಸಿ ಹಣವನ್ನು ಸಂಗ್ರಹಿಸಿ ಚನ್ನರಾಯಪಟ್ಟಣದಲ್ಲಿರುವ ಶಾಖೆಯ ಮೋಹನ್, ಮಮತ, ತ್ಯಾಗರಾಜು, ರೋಹನ್, ಬೇಬಿ ರವರ ಮುಖಾಂತರ ಕಾರ್ಯದರ್ಶಿಯಾದ ಚಿದಾನಂದ್ ರವರಿಗೆ ಹಣ ಪಾವತಿಸಿರುತ್ತೇನೆ ಎಂದರೆ ಸರಿ. ಪಾವತಿ ಸಂಬಂಧ ರಶೀದಿಯನ್ನು ನೀಡಿ ಪಾಸ್ ಪುಸ್ತಕದಲ್ಲಿ ನಮೂದಿಸಲಾಗಿತ್ತು ಎಂದರೆ ಸರಿ. 2012 ರಲ್ಲಿ ಕಾರ್ಯದರ್ಶಿಯಾದ ಚಿದಾನಂದ್ ರವರು ನಡೆಸುತ್ತಿದ್ದ ಸಮನ್ವಯ ಎಲ್ತ್ ಎಜುಕೇಶನ್ ಮತ್ತು ರೂರಲ್ ಡೆವಲಪ್ ಮೆಂಟ್ ಸೊಸೈಟಿಯನ್ನು ಸಂತೋಷ್ ರವರು ಬಾಳಿಗೊಂದು ಗುರಿ ರೂರಲ್ ಡೆವಲ್ ಮೆಂಟ್ ಸಂಸ್ಥೆ ಹೆಸರಿನಲ್ಲಿ ಮುಂದುವರಿಸಿರುತ್ತಾರೆ ಎಂದರೆ ಸರಿ. ಸದರಿ ಸಂಸ್ಥೆಯ ಅಧ್ಯಕ್ಷರಾಗಿ ನಿಂಗರಾಜು 2ನೇ ಆರೋಪಿ ವಹಿಸಿದ್ದರು ಎಂದರೆ ಸರಿ. 2ನೇ ಆರೋಪಿ ಸಂಸ್ಥೆಯನ್ನು ಮುಂದುವರೆಸಿಕೊಂಡು ಮೈಕ್ರೋ ಇನ್ಸೂರೆನ್ಸ್ ಸ್ಕೀಂ ನ ಸಿಬ್ಬಂದಿಯವರೊಂದಿಗೆ ಸಂಪರ್ಕದಲ್ಲಿ ಇದ್ದರು ಎಂದು ತಿಳಿದುಕೊಂಡಿದ್ದೆ ಎಂದರೆ ಸರಿ. ಪಾಲಿಸಿದಾರರಿಂದ ಹ ಣವನ್ನು ಸಂಗ್ರಹಿಸಿ 3ನೇ

ಆರೋಪಿಗೆ ಪಾವತಿಸುತ್ತಿದ್ದೆ ಎಂದರೆ ಸರಿ. 3ನೇ ಆರೋಪಿ ಈ ಸಂಬಂಧ ರಶೀದಿಗಳನ್ನು ನೀಡಿ ಪಾಸ್ ಪುಸ್ತಕದಲ್ಲಿ ಸಹ ನಮೂದಿಸಿದ್ದಾರೆ ಎಂದರೆ ಸರಿ. ಸದರಿಯವರು ನಾನು ಕಟ್ಟಿದ್ದ ಪಾಲಿಸಿ ಹಣದಲ್ಲಿ ರೂ. 25,000/- ಹಣವನ್ನು ಸಂಸ್ಥೆಗೆ ಪಾವತಿಸದೇ ಮೋಸ ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ವಿ ವಿ ರವರಿಂದ . ವಕೀಲರಿಂದಃ</u>**

ನಾನು 6 ವರ್ಷಗಳ ಕಾಲ ಪಾಲಿಸಿ ಹಣವನ್ನು ಕಲೆ ಹಾಕಿದ್ದೇನೆ. ನಾನು ಪಾಲಿಸಿದಾರರಿಗೆ ಯಾವುದೇ ರಶೀದಿಗಳನ್ನು ನೀಡಿಲ್ಲ. ಸಾಕ್ಷಿ ಮುಂದುವರೆದು ಪ್ರಾರಂಭದಲ್ಲಿ ರಶೀದಿಗಳನ್ನು ನೀಡುತ್ತಿದ್ದರು ಅದನ್ನು ನಾನು ಪಾಲಿಸಿದಾರರಿಗೆ ನೀಡುತ್ತಿದ್ದೆ. ನಂತರ ಪಾಸ್ ಪುಸ್ತಕದಲ್ಲಿ ನಮೂದು ಮಾಡುತ್ತಿದ್ದರು ಎನ್ನುತ್ತಾರೆ. ಎಷ್ಟು ಹಣಕ್ಕೆ ರಶೀದಿಗಳನ್ನು ನೀಡಿರುತ್ತಾರೆ ಎಂದು ನಾನು ಪೋಲೀಸರಿಗೆ ತಿಳಿಸಿರುವುದಿಲ್ಲ. ನಾನು ಸಿ ಡಿ ಪಿ ಒ ಅವರಿಂದ ಪಾಲಿಸಿ ಏಜೆಂಟರಾಗಿ ಕೆಲಸ ಮಾಡಲು ಅನುಮತಿ ಪಡೆದಿಲ್ಲ. ನಾನು ಜನಗಳಿಂದ ಹಣ ಪಡೆದು ನನ್ನಿಂದಲೇ ಮೋಸವಾಗಿದೆ ಎಂದರೆ ಸರಿಯಲ್ಲ. ಈಗ ಪಾಲಿಸಿದಾರರಿಗೆ ಹಣ ನೀಡಬೇಕಾಗುತ್ತದೆ ಎಂಬ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಸಹಾಯಕ ಅಭಿಯೋಜಕರ ಪಾಟಿ ಸವಾಲಿನಲ್ಲಿ ಅಂಶಗಳು ಸರಿ ಎಂದು ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**